INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -05,September-October, 2026
Page No,51-62
Peer -Reviewed, Refereed Journal

# ಬಡಗ ಸಮುದಾಯದಲ್ಲಿ ಹೆತ್ತೆ ಪರಂಪರೆ ಕುರಿತ ಅವಲೋಕನ

**ವರ್ಷಿಣಿ.ಬಿ.ಎನ್.**[1]

ಇಂದು ತಮಿಳುನಾಡಿಗೆ ಸೇರಿರುವ ನೀಲಗಿರಿ ಪರ್ವತ ಪ್ರದೇಶಗಳಲ್ಲಿ ನೆಲೆಸಿರುವ ಬಡಗ ಸಮುದಾಯವು, ದಕ್ಷಿಣ ಭಾರತದ ಅತ್ಯಂತ ವೈಶಿಷ್ಟ್ಯ ಪರ್ವತ ಸಮುದಾಯಗಳಲ್ಲಿ ಒಬ್ಬರು. ಬಡಗರು ಒಂದು ವಲಸೆ ಸಮುದಾಯವಾಗಿದ್ದು. ಇವರ ಮೂಲದ ಬಗ್ಗೆ ಹಲವಾರು ಜಿಜ್ಞಾಸೆಗಳಿವೆ. ಆದರೂ ಬಹುತೇಕ ಸಂಶೋಧಕರು, ವಿದ್ವಾಂಸರು ಇವರ ಮೂಲ ಹಳೇ ಮೈಸೂರು ಪ್ರಾಂತ್ಯದ ಪ್ರದೇಶಗಳು ಎಂದು ಸಾಬೀತುಪಡಿಸಿದ್ದಾರೆ. **"ಪಾಮೆ"** ಎಂಬ ಕೃತಿಯ ಕತೃವಾದ ಡಾ.ಬಾಲಸುಬ್ರಹ್ಮಣಿಯಂ ಅವರು ಹೇಳುವಂತೆ; ಬಡಗರು ದೆಹಲಿ ಸುಲ್ತಾನರ ಸೇನಾಪತಿ **"ಮಲ್ಲಿಕಾಫರ್"**ನು ದಕ್ಷಿಣ ಭಾರತದ ಮೇಲೆ ದಾಳಿ ನಡೆಸಿದ ಸಮಯದಲ್ಲಿ ಅಂದರೆ ಸುಮಾರು ಕ್ರಿ.ಶ.1311ರ ಅನಂತರದಲ್ಲಿ ವಲಸೆಯಾದರು. ನೀಲಗಿರಿಗೆ ಉತ್ತರ ದಿಕ್ಕಿನಲ್ಲಿರುವ ಪ್ರದೇಶಗಳಿಂದ ವಲಸೆ ಬಂದ ಇವರನ್ನು ಆ ದಿಕ್ಕಿನಿಂದ ಹೆಸರಿಸಲಾಯಿತು. ಕನ್ನಡದ " **ಬಡಗಣ** " [ಉತ್ತರ ದಿಕ್ಕು] ಎಂಬ ಪದದಿಂದ ಇವರನ್ನು **'ಬಡಗ'** ಎನ್ನಲಾಯಿತು. ಇವರ ಭಾಷೆ ಬಡುಗು. ಬಡುಗು ಭಾಷೆ ಹಾಗೂ ಕನ್ನಡ ಭಾಷೆಯು ಶೇಕಡಾ 80ಕ್ಕಿಂತಲೂ ಹೆಚ್ಚು ಸಾಮ್ಯತೆಯನ್ನು ಹೊಂದಿದೆ ಎಂದರೆ ತಪ್ಪಿಲ್ಲ. ಆದರೆ ವಲಸೆಯ ಅನಂತರದಲ್ಲಿ ಕಾಲಕ್ರಮೇಣವಾಗಿ ಬಡಗ ಭಾಷೆಯ ಮೇಲೆ ತಮಿಳು ಭಾಷೆಯ ಪ್ರಭಾವವನ್ನು ಕಾಣಬಹುದಾಗಿದೆ. ಬಡಗ ಭಾಷೆಗೆ ಲಿಪಿ ಇಲ್ಲ. ತಮಿಳು ಭಾಷೆಯನ್ನೇ ಬಡಗರು ಲಿಪಿಯಾಗಿ ಬಳಸಿಕೊಂಡು ಬಂದಿದ್ದಾರೆ. ವಲಸೆ ಬಂದ ಆರಂಭದಲ್ಲಿ ಪಶುಸಂಗೋಪನೆ ಮತ್ತು ಬೇಟೆ ಇವರ ಮೊದಲು ವೃತ್ತಿಯಾಗಿತ್ತು. ನೀಲಗಿರಿಯ ಮೂಲ ಬುಡಕಟ್ಟು ಜನಾಂಗಗಳಾದ ಕೋತ, ತೋಡ, ಕುರುಂಬ ಮತ್ತು ಇರುಳ ಎಂಬಂತಹ ಮೂಲನಿವಾಸಿಗಳ ವಿಶ್ವಾಸಗಳಿಸುವಲ್ಲಿ ಯಶಸ್ವಿಯಾದ ಅನಂತರದಲ್ಲಿ ಬಡಗರು ತಮ್ಮ ವಲಸೆ ಪೂರ್ವ ವೃತ್ತಿಯಾದ ಕೃಷಿಯನ್ನೇ ಇಲ್ಲಿಯೂ ಮುಂದುವರೆಸಿದರು. ಬಡಗರು ವಲಸೆಯ ಅನಂತರದಲ್ಲಿ ತಮ್ಮ ಜೀವನಶೈಲಿ ಹಾಗೂ ಆಚರಣೆಗಳಲ್ಲಿ ಕೆಲವೊಂದು ಬದಲಾವಣೆಗಳನ್ನು ತಂದು ಹೊಸ ವಿಚಾರಗಳನ್ನು ಹಾಗೂ ಆಚರಣೆಗಳನ್ನು ಅಳವಡಿಸಿಕೊಂಡರು, ಇದರಿಂದ ವಲಸೆ ಸಮುದಾಯ

[1] **ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು.**

ಎಂಬ ಹಣೆಪಟ್ಟಿಯಿಂದ ಪ್ರಬಲ ಜನಸಮುದಾಯವಾಗಿ ರೂಪಾಂತರಗೊಳ್ಳುವುದು ಅವರ ಉದ್ದೇಶವಾಗಿತ್ತು. ಕಾಲಕ್ರಮೇಣವಾಗಿ ಬಡಗರು ನೀಲಗಿರಿಯ ಸಾಮಾಜಿಕ, ಆರ್ಥಿಕ ಬದುಕನ್ನು ನಿರ್ಧರಿಸುವ ಮಟ್ಟಕ್ಕೆ ಬೆಳೆದರು. ತಮ್ಮದೇ ಆದ ವೈಶಿಷ್ಟ್ಯ ಗ್ರಾಮ ವಾಸಿ, ದೇವಾಲಯ ಕೇಂದ್ರಿತ ಆರಾಧನೆ. ಪ್ರಕೃತಿ ಆರಾಧನೆಗಳನ್ನು ಬದುಕಿನ ಅವಿಭಾಜ್ಯ ಅಂಗವಾಗಿಸಿಕೊಂಡಿದ್ದರು. ಬಡಗರು ಶೈವ ಪರಂಪರೆಯೊಂದಿಗೆ ಪೂರ್ವಜರ ಆರಾಧನೆ ಹಾಗೂ ಸ್ತ್ರೀ ದೇವತೆಯ ಆರಾಧಕರಾಗಿದ್ದಾರೆ.

ಬಡಗ ಹಬ್ಬಗಳು **"ಬಡಗ ಕ್ಯಾಲೆಂಡರ್‌ನನ್ನು"** ಅವಲಂಬಿಸಿದೆ. ಬಡಗರ ಹಬ್ಬಗಳನ್ನು ಕೃಷಿ ಹಬ್ಬಗಳು, ದೈವಾರಾಧನೆ ಹಬ್ಬಗಳು ಮತ್ತು ಆಧುನಿಕ ಹಬ್ಬಗಳು ಎಂದು ವಿಂಗಡಿಬಹುದಾಗಿದೆ. ಬಡಗರು ಕೃಷಿಕರಾಗಿರುವ ಕಾರಣ ಬಹಳಷ್ಟು ಹಬ್ಬಗಳು ಕೃಷಿ ಕೇಂದ್ರಿತ ಹಬ್ಬಗಳಾಗಿವೆ. ಬಡಗರಲ್ಲಿ ಅತ್ಯಂತ ಪವಿತ್ರ ಹಾಗೂ ಮಹತ್ವದ ಹಬ್ಬವೆಂದರೆ **"ಹೆತ್ತೆ ಹಬ್ಬ"** ಈ ಹಬ್ಬವು ಪೂರ್ವಜ ಆರಾಧನೆ, ತ್ಯಾಗ, ಸತ್ಯನಿಷ್ಠೆ ಮತ್ತು ಸಮುದಾಯದ ಏಕತೆ ಮತ್ತು ನಂಬಿಕೆಗಳನ್ನು ಒಟ್ಟುಗೂಡಿಸುತ್ತದೆ. ವರ್ಷದಲ್ಲಿ ಒಂದು ಬಾರಿ ಆಚರಿಸುವ ಈ ಹಬ್ಬಕ್ಕೆ ಎಲ್ಲಾ ಬಡಗರು ಭಾಗವಹಿಸಲೇಬೇಕು ಎಂಬ ನಿಯಮವಿದೆ. ಐತಿಹಾಸಿಕವಾಗಿ ಹೆತ್ತೆ ಆರಾಧನೆ ಸುಮಾರು 16ನೇ ಶತಮಾನದಲ್ಲಿ ವಿಜಯನಗರ ಹಾಗೂ ಉಮ್ಮತ್ತೂರು ಪಾಳೆಗಾರರ ಕಾಲಘಟ್ಟದಲ್ಲಿ ರೂಪುಗೊಂಡಿತ್ತು ಎಂಬುದನ್ನು ಬಡಗ ಜಾನಪದ ಕತೆಗಳಿಂದ ತಿಳಿಯಬಹುದು. ಸ್ತ್ರೀಯರು ಸಮುದಾಯದ ರಕ್ಷಕಿಯರಾಗಿ ದೈವತ್ವವನ್ನು ಪಡೆದರು. ಇವರನ್ನು ಹೆತ್ತೆ ಎಂದು ಕರೆಯಲಾಯಿತು. ಹೆತ್ತೆ ಎಂದರೆ; ಬಡಗ ಭಾಷೆಯಲ್ಲಿ **"ಅಜ್ಜಿ"** ಎಂಬ ಅರ್ಥ ಇದೆ. ಆದರೆ ಎಲ್ಲಾ ಹೆತ್ತೆಯರು ವೃದ್ದೆಯರಾಗಿರಲಿಲ್ಲ. ಬಿರಗಣಿ ಮತ್ತು ಜಗತಲ ಗ್ರಾಮದ ಹೆತ್ತೈಯರು ಕುಮಾರಿಯಾಗಿ ಪ್ರಾಣ ತ್ಯಜಿಸಿದ ಕಾರಣ ಇವರು ಎಲ್ಲಾ ಹೆತ್ತೆಯರಿಗಿಂತ ಪವಿತ್ರರು ಎನಿಸಿಕೊಂಡರು ಇವರಿಂದ ಹೆತ್ತೆಯೆಂದರೆ ವಯೋವೃದ್ಧ ಮಹಿಳೆ ಎಂಬ ಪದಶಃ ಅರ್ಥ ಅಲ್ಲ, ಬದಲಾಗಿ ಅಜ್ಜಿ ಎಂಬ ಪದವನ್ನು ಇಲ್ಲಿ ಗೌರವಪೂರ್ವಕವಾಗಿ ಬಳಸುತ್ತಾರೆ ಎಂದು ತಿಳಿಯಬಹುದು.

ಹೆತ್ತೆಯನ್ನು ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಅವುಗಳೆಂದರೆ; ಹೆತ್ತೆ, ಹೆತ್ತೈ, ಹತ್ತೈಸ್ವಾಮಿ, ಹೆತ್ತಮ್ಮನ್, ಮಾಯದ ಕಣಿ, ಇರಮಸಿ ಇತ್ಯಾದಿಗಳು, ಹೆತ್ತೆ ಆರಾಧನಾ ಪದ್ದತಿ ಮತ್ತು ಪರಂಪರೆಯನ್ನು ಅರಿಯದೇ ಬಡಗರ ಮೂಲಧರ್ಮವನ್ನು ಅರಿಯಲು ಸಾಧ್ಯವಿಲ್ಲ. "ಹೆತ್ತೆ ಹಬ್ಬ" ಬಡಗರ ಸಮುದಾಯದಲ್ಲಿ ಬಹಳ ಪ್ರಮುಖ ಪಾತ್ರ ವಹಿಸುತ್ತದೆ.

**ಹೆತ್ತೆ ಪರಂಪರೆ ಮತ್ತು ಇತಿಹಾಸ:** ನೆದುಗುಲ್ಲದಲ್ಲಿ ಆಚರಿಸಲ್ಪಡುವ ಹೆತ್ತೈ ಹಬ್ಬವನ್ನು ಅವಲೋಕಿಸಿದರೆ; ಈ ಹಬ್ಬದ ಆಚರಣೆಯ ಆರಂಭಿಕ ಕಾಲವನ್ನು ಊಹಿಸಬಹುದು. ಬಡಗ ಜಾನಪದ ಕಥೆಗಳ ಪ್ರಕಾರ ನೆದುಗುಲ್ಲ ಗ್ರಾಮಕ್ಕೆ ಸೇರಿದ ಲಿಂಗಾಯಿತ ಯುವತಿ ಮುತ್ತುಗೌರಿ, ಉಮ್ಮತ್ತೂರು ಆಳ್ವಿಕೆ ಕುಟುಂಬದ ಸದಸ್ಯನಾಗಿದ್ದ ಉದಯರಾಯ ಕೋಟೆಯ ನಾಯಕ ಉದಯರಾಯವನೊಂದಿಗೆ

ವಿವಾಹವಾದಳು ಎಂದು ಉಲ್ಲೇಖಿಸಲಾಗಿದೆ. ಇತಿಹಾಸಕಾರರ ಪ್ರಕಾರ; ಉದಯರಾಯ ಕೋಟೆ ಕ್ರಿ.ಶ. 1578ರ ಸುಮಾರಿಗೆ ನಿರ್ಮಿಸಲ್ಪಟ್ಟಿತು. ಮುತ್ತುಗೌರಿಯ ಅಜ್ಜಿಯನ್ನು ನೆಯದುಗುಲ್ಲದ ಹೆತ್ತೈಯಾಗಿ ವೈಭವೀಕರಿಸಲಾಗಿತ್ತು. ಬಡಗರಲ್ಲಿ ಹೆತ್ತೈ ಹಬ್ಬವು 16ನೇ ಶತಮಾನದ ಮಧ್ಯಭಾಗ ಅಥವಾ ಅಂತ್ಯದ ವೇಳೆಗೆ ಆರಂಭವಾಯಿತು ಎಂದು ನಿರ್ಧರಿಸಬಹುದು.

ಆರಂಭದಲ್ಲಿ ಹೆತ್ತೆ ಹಬ್ಬವನ್ನು ಪೊರಂಗಾಡು ಸೀಮೆಯಲ್ಲಿ [ಕೋತಗಿರಿ ತಾಲ್ಲೂಕು] ಮಾತ್ರ ಆಚರಿಸಲಾಗುತ್ತಿತ್ತು. ಮುಖ್ಯವಾಗಿ ಬಿರಗಣಿ, ಪೆದ್ದಾಲ, ಇರುಪ್ಪುಗಲ್, ನುಂದಲಗಳಲ್ಲಿ ಆಚರಿಸಲಾಗುತಿತ್ತು. ಆದರೆ ಈಗ ಪ್ರತಿಯೊಂದು ಬಡಗ ಗ್ರಾಮದಲ್ಲಿ ಹೆತ್ತೆಗೆ ಒಂದು ಪುಟ್ಟ ಗುಡಿ ಇದೆ. ಬಿರಗಣಿಗೆ ಸಂಬಂಧಿಸಿದ ದಂತಕಥೆಯನ್ನು ಜನಾಂಗಶಾಸ್ತ್ರಜ್ಞರು ದಾಖಲಿಸಿದ್ದಾರೆ. ಈ ದಂತಕಥೆಯ ಪ್ರಕಾರ: ನೀಲಗಿರಿ ಜಿಲ್ಲೆಯ ಮೇಕುನಾಡು ಸೀಮೆಯ ನುಂದಲ ಎಂಬ ಗ್ರಾಮವಿದೆ. ಸುಮಾರು ನೂರು ವರ್ಷಗಳ ಹಿಂದೆ [ಅಂದರೆ 1800ರ ಆಸುಪಾಸಿನಲ್ಲಿ] ಒಬ್ಬ ವ್ಯಕ್ತಿ ತನ್ನ ಮಗಳನ್ನು ಪೊರಂಗಾಡು ಸೀಮೆಯ ಒಬ್ಬ ವ್ಯಕ್ತಿಯೊಂದಿಗೆ ವಿವಾಹ ಮಾಡಲು ನಿರ್ಧರಿಸಿದನು. ಈ ವಿವಾಹ ಆಕೆಗೆ ಇಷ್ಟವಿರಲಿಲ್ಲ. ತಂದೆಯು ಒತ್ತಾಯ ಮಾಡುತ್ತಿದ್ದರೂ. ನಿರಾಕರಿಸುತ್ತಾ ಬಂದಳು. ತಂದೆಯ ಮಾತುಗಳಿಂದ ನೊಂದ ಆಕೆ ಒಂದು ಕೆರೆಯ ಬಳಿ ಬಂದು, ದಡದಲ್ಲಿದ್ದ  ಮರದ ಕೆಳಗೆ ಕುಳಿತು ಸ್ನಾನ ಮಾಡಿ ನಂತರದಲ್ಲಿ ಕೆರೆಗೆ ಹಾರಿ ಪ್ರಾಣಬಿಟ್ಟಳು. ಅನಂತರದಲ್ಲಿ ಪೊರಂಗಾಡು ಸೀಮೆಯ ಬಿರಗಣಿ ಗ್ರಾಮದ ಒಬ್ಬ ವ್ಯಕ್ತಿಗೆ ಆ ಮಹಿಳೆ ಕನಸಿನಲ್ಲಿ ಬಂದು ತಾನು ಪಾರ್ವತಿ ಅವತಾರವಾಗಿದ್ದು, ಬಿರಗಣಿಯಲದಲ್ಲಿ ದೇವಸ್ಥಾನ ನಿರ್ಮಿಸಲು ಸೂಚಿಸಿದಳು. ನುಂದಲ ಜನರು ಕೆರೆಯ ಸುತ್ತ ತಡೆಗೋಡೆ ನಿರ್ಮಿಸಿ. ಮಹಿಳೆಯರಿಗೆ ಪ್ರವೇಶವನ್ನು ನಿರ್ಬಂಧಿಸಿದರು. ಉಪವಾಸ ಮಾಡಿ ಶುದ್ಧೀಕ್ರಿಯೆಗಳನ್ನು ಮಾಡಿದ ಪೂಜಾರಿ ಹಾಗೂ ಕೆಲವು ಬಡಗರಿಗೆ ಮಾತ್ರ ಆ ತಡೆಗೋಡೆ ದಾಟಿ ಹೋಗಿ ಪೂಜೆ ಸಲ್ಲಿಸಲು ಅವಕಾಶ ಇತ್ತು. ತೆಂಗಿನಕಾಯಿ ಹೊಡೆದು, ಅಕ್ಕಿ, ಹೂವು-ಹಣ್ಣುಗಳನ್ನು ಅರ್ಪಿಸಿ ದೇವಿಗೆ ಪೂಜೆ ಮಾಡಲಾಗುತ್ತಿತ್ತು. ಇಂದು ಆ ದೇಗುಲ "ಹೆತ್ತೆಸ್ವಾಮಿಯ ಪ್ರಮುಖ ದೇವಸ್ಥಾನವಾಗಿದೆ" [ಥರ್ಸ್ಟನ್ ಹಾಗೂ ರಂಗಾಚಾರಿ, 1909].

ಹೆತ್ತೆಯನ್ನು **"ಮಾಯದ ಕಣಿ"** ಎಂದು ಸಹ ಕರೆಯುತ್ತಾರೆ. ಮಾಯದ ಕಣಿ ಎಂದರೆ; **"ಮಾಯೆಯ ಮೂಲಕ ಅನಂತದೆಡೆಗೆ ಸಾಗಿದ ಕನ್ಯೆ"** *[A Virgin who Returned to eternity through maya]* ಎಂದರ್ಥ.  **"ಮಾಯದ ಕಣಿ ಮಾಯವಾದಳು"** ಎಂದು ಬಡಗರು ಹೆತ್ತೆ ಹಬ್ಬದಲ್ಲಿ ಹಾಡುವ ಹಾಡುಗಳು ಮತ್ತು ಪ್ರಾರ್ಥನೆಗಳಲ್ಲಿ ಈ ಪದವನ್ನು ಕಾಣಬಹುದಾಗಿದೆ. ಹೆತ್ತೆಯನ್ನು **"ಮಸಿ ಮತ್ತು ಇರಮಸಿ"** ಎಂದು ಸಹ ಕರೆಯುತ್ತಾರೆ. **'ಇರ'** ಎಂದರೆ; ದಯೆ, ಕರುಣೆ ಎಂದರ್ಥ **'ಇರಮಸಿ'** ಎಂದರೆ; ಕರುಣೆ ತೋರುವ ತಾಯಿ ಎಂಬ ಅರ್ಥ ಬರುತ್ತದೆ. ಹೆಚ್ಚಿನ ಹೆತ್ತೆಯರನ್ನು ಇರಮಸಿ ಎಂದು ಕರೆಯಲಾಗುವುದು.

**ಹೆತ್ತೆ ಕುರಿತು ವಿದ್ವಾಂಸರ ಅಭಿಪ್ರಾಯಗಳು:–**

ಹೆತ್ತೆಯ ಬಗ್ಗೆ ವಿವಿಧ ವಿದ್ವಾಂಸರು ಮತ್ತು ಸಂಶೋಧಕರ ಅಭಿಪ್ರಾಯಗಳನ್ನು ನಾವು ಈ ಮುಂದಿನಂತೆ ನೋಡಬಹುದಾಗಿದೆ.

- ಹಾರ್ಕ್ನೆಸ್ [1832: 106] ಅವರು ಹೇಳುವಂತೆ; ಕನಿಷ್ಠ ಹನ್ನೊಂದು ಬಡಗ ಹಳ್ಳಿಗಳು ಹೆತ್ತೆ ಹಾಗೂ ಹಿರಿಯೋದಯ [ಅಯ್ಯ] ನನ್ನು ಹಳ್ಳಿಗಳ ಸ್ಥಾಪಕರು ಎಂದು ನಂಬಲಾಗಿದೆ. ಪುರಾಣದ ಪ್ರಕಾರ; ಹೆತ್ತೈ ಹಾಗೂ ಹಿರಿಯೋದಯರನ್ನು ಗ್ರಾಮ ದೇವತೆಗಳಾಗಿ ಪೂಜಿಸಲಾಗಿದೆ.

- ಬಿಷಪ್ ವೈಟ್‌ಹೆಡ್ [1921: 126] ಅವರು ಹೇಳುವಂತೆ; ಹೆತ್ತೆ ಅನೇಕ ಕಾರಣಗಳಿಂದ ಆದರ್ಶ ಮಹಿಳೆಯಾಗಿ ಕಾಣಿಸಿಕೊಂಡಿದ್ದಾಳೆ ಎಂಬುದು ಅವರ ಪುರಾಣದಿಂದ ತಿಳಿದುಬರುತ್ತದೆ. ಹೆತ್ತೆಯ ಪಾವಿತ್ರ್ಯತೆಗೆ ಮಾನ್ಯತೆ ಕೊಟ್ಟ ಕಾರಣದಿಂದಾಗಿ ವಯೋವೃದ್ಧ ಗಂಡನೊಂದಿಗೆ ದೇಹವನ್ನು ಹಂಚಿಕೊಳ್ಳಲು ಬಯಸದೇ, ಬದಲಿಗೆ ನೀರಿನಲ್ಲಿ ಮುಳುಗಿ ಪ್ರಾಣಬಿಟ್ಟಳು. ಮತ್ತೊಂದು ಹೆತ್ತೆಯು ತನ್ನ ಪತಿಯ ಹಿರಿಯ ಪತ್ನಿಗೆ ಮೊದಲು ಸಂತಾನವಾಗುವವರೆಗೆ ತಾನು ಗರ್ಭಧರಿಸಬಾರದೆಂದು ನಿಸ್ವಾರ್ಥ ಯೋಚನೆ ಮಾಡಿದವಳು. ಇನ್ನೊಬ್ಬ ಹೆತ್ತೆಯ ಪತಿ ಹೊಲದ ಕಾವಲು ಕಾಯಲು ಹೋದಾಗ ಗುಡ್ಡವು ಕಾಡ್ಗಿಚ್ಚಿಗೆ ತುತ್ತಾಯಿತ್ತು. ಹೆತ್ತೆ ಆತನನ್ನು ಹುಡುಕಲು ಹೋಗಿ ತನ್ನ ಪತಿ ಸಾವನ್ನಪ್ಪಿರಬಹುದು ಎಂದು ತಿಳಿದೊಡನೆ ತಾನು ಅದೇ ಬೆಂಕಿಗೆ ಹಾರಿ ಪ್ರಾಣಬಿಟ್ಟಳು. ಮತ್ತೊಂದು ಕಥೆಯಲ್ಲಿ ಹೆತ್ತೆ ಪತಿ ಚೆಟ್ಟಿ ಮಹಿಳೆಯೊಂದಿಗೆ ಇದ್ದಾಗ ಮನೆಗೆ ಬೆಂಕಿ ತಗುಲಿತು. ಗಂಡನ ಅಕ್ರಮ ಸಂಬಂಧದ ಬಗ್ಗೆ ತಿಳಿದಿದ್ದರೂ ಸಹ ಹೆತ್ತೆ ಗಂಡನ ಸಾವಿನ ಸುದ್ದಿ ಕೇಳಿ ತಾನು ಅದೇ ಬೆಂಕಿಯಲ್ಲಿ ಪ್ರಾಣಬಿಟ್ಟಳು.

- ಸ್ವತಃ ಬಡಗರಾಗಿರುವ ಬೆಳ್ಳಿಗೌಡರ್ [1923: 41–45] ಅವರ ಪ್ರಕಾರ; ಹೆತ್ತೆ ಮಗ ಬರಬಾಳ ವಿವಾಹವಾಗದ ಹುಡುಗಿಯನ್ನು ತನ್ನ ಜೊತೆ ಇಟ್ಟುಕೊಂಡಿದ್ದನು ಮತ್ತು ಮಾಂಸಹಾರಿಯು ಆಗಿದ್ದನು. ಇದರಿಂದ ಸಸ್ಯಹಾರಿ 'ಹರುವ'ಜಾತಿಯ ಮಹಿಳೆಯಾಗಿದ್ದ ಹೆತ್ತೆ ಮನನೊಂದು ಆತ್ಮಹತ್ಯೆ ಮಾಡಿಕೊಂಡಳು.

- ಪಾಲ್ ಹಾಕಿಂಗ್ಸ್ [1989: 224–225] ಅವರು ಹೇಳುವಂತೆ; ಹೆತ್ತೆಯು ಚಿಕ್ಕ ಹುಡುಗಿಯಾಗಿದ್ದಾಗ ಆಕೆ ತಂದೆ ಅವಳನ್ನು ತನ್ನ ತಂಗಿಯ ಗಂಡನಿಗೆ ಮದುವೆ ಮಾಡಿಕೊಡುವುದಾಗಿ ವಾಗ್ದಾನ ಕೊಟ್ಟಿದ್ದನು. ಆತನ ತಂಗಿ ವಯಸ್ಸಾದವಳು, ಬಂಜೆಯು ಆಗಿದ್ದಳು. ಬಡಗ ವಿವಾಹ ಪದ್ಧತಿಯ ಪ್ರಕಾರದಂತೆ; ತಂಗಿಯ ಗಂಡನಿಗೆ ಒಬ್ಬ ವಂಶೋದ್ಧಾರ

ನೀಡಬಲ್ಲ ಮಹಿಳೆಯನ್ನು ವಿವಾಹ ಮಾಡಿ ಕೊಡುವುದು ಆತನ ಕರ್ತವ್ಯವಾಗಿತ್ತು. ಹೆತ್ತೆಯು ಪೌಢಾವಸ್ಥೆಗೆ ಬಂದ ದಿನ ಅವಳು ತನ್ನ ಅತ್ತೆಯ ಗಂಡನೊಂದಿಗೆ ದಾಂಪತ್ಯ ಜೀವನ ಆರಂಭಿಸುವುದು ಆಕೆಗೆ ಇಷ್ಟವಿರಲಿಲ್ಲ. ತನ್ನ ಸ್ನೇಹಿತೆಯರೊಂದಿಗೆ ಕಾಡಿಗೆ ಸೌದೆ ತರಲು ಹೋದ ಹೆತ್ತೆ, ಅವರಿಂದ ಬೇರ್ಪಟ್ಟ ಬೇರೊಂದು ದಾರಿ ಹಿಡಿದಳು. ಆತ್ಮಹತ್ಯೆ ಮಾಡಿಕೊಳ್ಳಲು ಸೌದೆಯೆಲ್ಲವನ್ನು ಒಟ್ಟು ಮಾಡಿ ಚಿತೆ ನಿರ್ಮಿಸಿಕೊಂಡಳೂ, ದೇವರ ಬಳಿ ಹಿರಿಯ ಪತ್ನಿಗೆ ಸಂತಾನ ಪ್ರಾಪ್ತಿಯಾಗಲಿ ಎಂದು ಪ್ರಾರ್ಥಿಸಿ, ತಾನು ಪವಿತ್ರಳಾಗಿದ್ದರೆ ತನ್ನನ್ನು ದೇವರು ಸ್ವೀಕರಿಸಬೇಕು ಎಂದು ಕೇಳಿಕೊಂಡು ಚಿತೆ ಪ್ರವೇಶಿಸಿದಳು. ಆಕೆಯ ಸಾವಿನ ಹನ್ನೊಂದು ದಿನಗಳ ನಂತರ ಹಿರಿಯ ಪತ್ನಿ ಗರ್ಭಿಣಿಯಾಗಿರುವುದು ಕಂಡುಬಂದಿತು.

- ಹೆಚ್.ಎನ್.ಕಲಿಯಾಗೌಡರ್ [ಟ್ರೈಬಲ್ ಸಾಲಿಡರಿಟಿ] ಅವರ ಅಭಿಪ್ರಾಯದಂತೆ; ಹೆತ್ತೆ ಎಂಬ ಪದಕ್ಕೆ "ಅಜ್ಜಿ" ಎಂಬ ಅರ್ಥ ಇದೆ. ಹೆತ್ತೆ ಸತಿ ಪದ್ಧತಿಯನ್ನಾಗಲಿ, ಆತ್ಮಹತ್ಯೆಯನ್ನಾಗಲಿ ಮಾಡಿಕೊಂಡಳು ಎಂದು ಹೇಳಲಾಗುವುದಿಲ್ಲ. ಬಡಗರಲ್ಲಿ ಈ ಸತಿ ಪದ್ಧತಿ ಹಾಗೂ ಅದರ ಬಗ್ಗೆ ಅರಿವು ಸಹ ಇರಲಿಲ್ಲ. ಹೆತ್ತೆ ಕೆರೆಯ ನೀರಿನಲ್ಲಿ ಲೀನವದಳು ಎಂದು ಹೇಳುತ್ತಾರೆ. ಮಸಿ( ಹೆತ್ತೆ) ಎಂಬ ಬಾಲೆ ಹಿರಿಯ ಅಕ್ಕನನ್ನು ಮದುವೆಯಾಗಲು ಒಪ್ಪದ ಅಯ್ಯನನ್ನು ವಿವಾಹವಾಗಲು ಒಪ್ಪಿದಳು. ಇದರಿಂದ ತನ್ನ ತಂದೆ ವಾಗ್ದಾನ ಉಳಿಯುತ್ತದೆ ಎಂದು ಆಕೆಗೆ ತಿಳಿದಿತ್ತು. ತಾನು ಹೆತ್ತೆಯ ಅಂತ್ಯವು ರಹಸ್ಯಮಯವಾಗಿಯು ನಂಬಲು ಅಸಾಧ್ಯವಾಗಿರುವಂತೆ ಕಾಣುತ್ತದೆ. ಆದರೆ ಬಡಗರು ಅದನ್ನು ನಂಬುತ್ತಾರೆ.
- ಆರ್.ಕೆ.ಹಾಲ್ದೊರೈ [2005] ಅವರು ಹೇಳುವಂತೆ; ಹೆತ್ತೆ ದೇವಿಗೆ ನಿರ್ದಿಷ್ಟ ರೂಪವಿಲ್ಲ. ಅವಳನ್ನು ಒಂದು ಕಲ್ಲಿನ ತುಂಡಿನಿಂದ ಪೂಜಿಸುತ್ತಾರೆ. ಆ ಕಲ್ಲಿನ ಆಕಾರ ಉದ್ದವಾಗಿರಬಹುದು. ಶಂಕಾಕಾರಾವಾಗಿರಬಹುದು ಅಥವಾ ನಿರಾಕಾರವಾಗಿರಬಹುದು. ಹೆತ್ತೆ ದೇವಿಯನ್ನು ಪ್ರತಿನಿಧಿಸುವ ಈ ಕಲ್ಲನ್ನು ಬಡಗ ಭಾಷೆಯಲ್ಲಿ **"ಹೆತ್ತೆಕಲ್ಲು"** ಎನ್ನುತ್ತಾರೆ. ಹೆತ್ತೆ ಎಂದರೆ "ವೃದ್ದೆ" ಎಂಬ ಅರ್ಥ ಮಾತ್ರ ಅಲ್ಲ. ತಿಳಿದಿರುವ ಹದಿಮೂರು ಹೆತ್ತೆಯವರಲ್ಲಿ ಕನ್ಯೆಯರು, ಮಧ್ಯವಯಸ್ಸಿನವರು, ವಿವಾಹಿತರು ಇದ್ದು ಮತ್ತು ಕೆಲವರು ಮಾತ್ರ ವೃದ್ಧೆಯರು.
- ನಂಜುಂಡನ್ [2005] ಅವರು ಹೇಳುವಂತೆ; ಹೆತ್ತೆಯ ಕಥೆಯು ಸಾಮಾನ್ಯವಾಗಿ ಮಹಿಳೆಯರ ಗೌರವವನ್ನು ಅದರಲ್ಲೂ ವಿಶೇಷವಾಗಿ ಬಡಗ ಮಹಿಳೆಯರ ಗೌರವವನ್ನು ಒತ್ತಿ ಹೇಳುತ್ತದೆ. ಬಿರಗಣಿ, ಪೆದುವ, ಜಕ್ಕಡ, ಕೆಟ್ಟಿ, ಎಬ್ಬನಾಡು, ಕುಂದ, ಚಿಕ್ಕಕೂನೂರು, ಬೆಬ್ಬೆನ್, ಕೂಕ್ಕಲು, ಹೊನ್ನಡಲೆ, ನೆದುಗುಲ, ಬಂದಿರೆ, ಉಯಿಲಟ್ಟಿ ಮುಂತಾದ ಹೆತ್ತೆಗಳು ವಿಭಿನ್ನ ಪರಿಸರದಲ್ಲಿ

ಬದುಕಿದ್ದರೂ ಸಹ ಒಂದೇ ರೀತಿಯ ಮಾರ್ಗವನ್ನು ಅನುಸರಿಸಿದರೆಂದ ಹೇಳಲಾಗುತ್ತದೆ. ಇದರಿಂದ ಹೆತ್ತೆ ಆರಾಧನೆ ಇನ್ನು ತನ್ನ ಹಳೆಯ ಸಂಪ್ರದಾಯವನ್ನೇ ಅನುಸರಿಸುತ್ತಿದೆ.

- ಡಾ.ಎನ್.ಸುಂದರದೇವನ್, IAS [2005] ಅವರ; ಪ್ರಕಾರ ಎಲ್ಲಾ ಹೆತ್ತೆಯರ ಬಗ್ಗೆ ಸಂಪೂರ್ಣವಾಗಿ ತಿಳಿದಿರುವವರು ಅಪರೂಪ. ಹೆತ್ತೆಯರು ಮಾನವ ರೂಪದ ದೇವರುಗಳು, ನಮ್ಮ ಮಧ್ಯೆ ಬದುಕಿದ್ದವರು. ಅವರು ಬಡಗ ಮಹಿಳೆಯರಲ್ಲಿ ಅಪರೂಪದ ರತ್ನಗಳು. ಹೆತ್ತೆಯರ ಇತಿಹಾಸವು ಪರೋಕ್ಷವಾಗಿ ಬಡಗರ ಇತಿಹಾಸದ ಪ್ರಮುಖ ಅಂಶಗಳ ಮೇಲೆ ಬೆಳಕು ಚೆಲ್ಲುತ್ತದೆ.

ಹೆತ್ತೆ ಕುರಿತು ವಿದೇಶಿ ವಿದ್ವಾಂಸರು ಹಾಗೂ ಭಾರತೀಯ ವಿದ್ವಾಂಸರ ಅಭಿಪ್ರಾಯಗಳಲ್ಲಿನ ವ್ಯತ್ಯಾಸಗಳನ್ನು ಗುರುತಿಸಬಹುದು. ವಿದೇಶಿ ವಿದ್ವಾಂಸರು ಹೆತ್ತೆಯ ಅಂತ್ಯ ಸತಿ ಪದ್ಧತಿ ಮತ್ತು ಆತ್ಮಹತ್ಯೆ ಎಂದು ಬಿಂಬಿಸಿದ್ದಾರೆ. ಆದರೆ, ಹೆಚ್.ಎನ್.ಕಲಿಯಾಗೌಡರ್ ಅವರು ಹೇಳುವಂತೆ; ಸತಿಪದ್ಧತಿಯ ಬಗ್ಗೆ ಬಡಗರಿಗೆ ಅರಿವಿರಲಿಲ್ಲ. ಅದರ ಆಚರಣೆ ನಡೆದಿರುವುದು ಅಸಾಧ್ಯ. ಇನ್ನು ಡಾ.ಎನ್.ಸುಂದರ್ ದೇವನ್ ಅವರು ಹೇಳುವಂತೆ; ಹೆತ್ತೆ ಚರಿತ್ರೆ ಬಗ್ಗೆ ಹಾಗೂ ಹೆತ್ತೆ ಅಂತ್ಯದ ಬಗ್ಗೆ ಯಾರಿಗೂ ಪರಿಪೂರ್ಣ ಮಾಹಿತಿ ಇಲ್ಲ. ಭೂತ ಕಾಲದಲ್ಲಿ ಅವೆಲ್ಲವು ಮಾಸಿಹೋಗಿದೆ. ಬಡಗ ಸಮುದಾಯದವರ ದೃಷ್ಟಿಯಲ್ಲಿ ಹೆತ್ತೆ ಕೇವಲ ಪುರಾಣ ಸಂಬಂಧಿತ ವ್ಯಕ್ತಿ ಅಲ್ಲ. ಆಕೆ ಜೀವಂತ ದೇವತೆ ಮತ್ತು ಸಮುದಾಯದ ರಕ್ಷಕಿ.

**ಅಯ್ಯ ಆರಾಧನೆ:** ಬಡಗ ಭಾಷೆಯಲ್ಲಿ "ಅಯ್ಯ" ಎಂದರೆ; ಅಜ್ಜ ಅಥವಾ ಹಿರಿಯ ವ್ಯಕ್ತಿ ಎಂಬ ಅರ್ಥವಿದೆ. ಕನ್ನಡದಲ್ಲಿ ಅಯ್ಯ ಎಂದರೆ; ತಂದೆ, ತಾತ, ಮುಖ್ಯಸ್ಥ ಅಥವಾ ಜಂಗಮ ಎಂಬ ಅರ್ಥಗಳಿವೆ. ಆದರೆ ನೇರವಾಗಿ ಎಲ್ಲೂ ಅಜ್ಜ ಅಥವಾ ತಾತ ಎನ್ನುವ ಅರ್ಥ ಇಲ್ಲ. ದೈವಿಕವಾಗಿ ನೋಡುವುದಾದರೆ; ಅಯ್ಯ ಎಂದರೆ; ಸ್ವಾಮಿ ಅಥವಾ ಯಜಮಾನ ಎಂದರ್ಥ, ಹೆತ್ತೆಯ ಸಂಗಾತಿಯೇ ಅಯ್ಯ. ಅಯ್ಯ ಆರಾಧನೆ ಹೆತ್ತೆ ಆರಾಧನೆಯ ಅವಿಭಾಜ್ಯ ಅಂಗವಾಗಿವೆ. ಅಯ್ಯನನ್ನು ವಯಸ್ಸಾದವರು ಹಿಡಿಯುವ ಊರುಗೋಲಿನ ಮೂಲಕ ನೆನಪಿಕೊಳ್ಳುತ್ತಾರೆ. ಅದು ಅವರ ಅಧಿಕಾರದ ಮತ್ತು ಹಿರಿತನದ ಸಂಕೇತವಾಗಿದೆ. ಅಯ್ಯ ಗೌರವ ಸೂಚಕ ಪದವಾಗಿದ್ದು ಅನೇಕ ಅಯ್ಯಗಳು ಕಿರಿಯ ವಯಸ್ಸಿನಲ್ಲೇ ಸತ್ತಿದ್ದರೂ, ಧರ್ಮನಿಷ್ಠೆ, ಶೌರ್ಯದಿಂದ ದೈವತ್ವ ಪಡೆದರು.

**ಹೆತ್ತೆ ಹಬ್ಬದ ವಿಧಿ–ವಿಧಾನಗಳು:** ಎಂಟು ದಿನಗಳ ಕಾಲ ವಿಜೃಂಭಣೆಯಿಂದ ನಡೆಯುವ ಈ ಹಬ್ಬವು ಬಡಗ ತಿಂಗಳಾದ **"ಹೆಮ್ಮಟ್ಟಿ"** [ಮಾಘ] ಮಾಸದಲ್ಲಿ ಅಂದರೆ; ಡಿಸೆಂಬರ್–ಜನವರಿ ತಿಂಗಳಲ್ಲಿ ನಡೆಯುತ್ತದೆ. ಹೆತ್ತೆ ಹಬ್ಬದ ದಿನಾಂಕ ಪ್ರತಿ ವರ್ಷ ಬದಲಾಗುತ್ತಿರುತ್ತದೆ ಹಾಗೂ ಬಡಗ ಕ್ಯಾಲೆಂಡರ್ ಆಧಾರಿತವಾಗಿ ದಿನಾಂಕ ನಿಗಧಿ ಮಾಡಲಾಗುತ್ತದೆ. ಈ ಎಂಟು ದಿನಗಳನ್ನು ಬಡಗರು **"ಕೋಲು"** ಎಂದು ಕರೆಯುತ್ತಾರೆ. ಈ ಎಂಟು ದಿನಗಳ ನಂತರ ಒಂಬತ್ತನೇ ದಿನದಂದು ಅಂದರೆ ಸೋಮವಾರ

[ಬಡಗ ಭಾಷೆಯಲ್ಲಿ ಸೋವರ] ದಂದು ಹೆತ್ತೆ ಹಬ್ಬ ಆಚರಿಸಲಾಗುತ್ತದೆ. ಇದು ಬಡಗರಲ್ಲಿ ಅತ್ಯಂತ ಪವಿತ್ರ ದಿನವಾಗಿದೆ. ಸಾಮಾನ್ಯವಾಗಿ ಹೆತ್ತೆ ಹಬ್ಬವು ಒಂಬತ್ತರಿಂದ ಹನ್ನೊಂದು ದಿನಗಳ ಆಚರಣೆ ಆಗಿದೆ. ಬಿರಗಣಿಯ ಹೆತ್ತೆ ಹಬ್ಬವು ವಿಶೇಷ ಸ್ಥಾನಮಾನ ಹೊಂದಿದ್ದು, ಕೃಷಿ ಕಾರ್ಯಗಳು ನಿಂತ ಅನಂತರದಲ್ಲಿ ನಡೆಯುವ ಹಬ್ಬವಾಗಿದೆ. ಇದಕ್ಕಾಗಿ ಈ ಹಬ್ಬವನ್ನು **"ಏರುಮುಡಿದ ಹಬ್ಬ"** ಎಂದು ಸಹ ಕರೆಯುತ್ತಾರೆ. ಏರು ಎಂದರೆ; ನೇಗಿಲು, ಮುಡಿವ ಎಂದರೆ; ಪೂರ್ಣಗೊಳಿಸುವುದು ಎಂದರ್ಥ. ಬಿರಗಣಿ ಹೆತ್ತೆಯು ದೊಡ್ಡ ಹೆತ್ತೆ ಆಗಿದ್ದು, **"ಹೆತ್ತೆಸ್ವಾಮಿ"** ಎಂದು ಕರೆಯುತ್ತಾರೆ. ಬಿರಗಣಿ ಹೆತ್ತೈ ಹಬ್ಬದ ವಿಧಿ–ವಿಧಾನಗಳನ್ನು ಈ ಮುಂದಿನಂತೆ ಟಿಪ್ಪಣಿ ಮಾಡಬಹುದಾಗಿದೆ.

ಹಬ್ಬದ ಮುಖ್ಯ ಅಂಗವೆಂದರೆ; "ಹೆತ್ತೈಕರು" **ಮಾಡುವ ವ್ರತಾಚರಣೆ** – ಹೆತ್ತೆ ದಡಿ ಹೊಂದಿರುವ ಕುಟುಂಬದಿಂದ ಒಬ್ಬ ಸದಸ್ಯ ಹಬ್ಬಕ್ಕೂ ಮುನ್ನ ಆರು ವಾರಗಳ ಕಾಲ ಕಠಿಣ ವ್ರತ ಆಚರಿಸಬೇಕು. ಈ ಅವಧಿಯಲ್ಲಿ ಗೃಹಸ್ಥ ಜೀವನದಿಂದ ದೂರವಿದ್ದು, ಬ್ರಹ್ಮಚರ್ಯ ಪಾಲಿಸಬೇಕು. ದೇಹ ಮತ್ತು ಮನಸ್ಸಿನ ಶುದ್ಧತೆಯನ್ನು ಕಾಪಾಡಿಕೊಂಡು ಸಂಪೂರ್ಣವಾಗಿ ಹೆತ್ತೆ ದೇವಿಯ ಭಕ್ತಿಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಮಾಂಸಹಾರ, ಮದ್ಯಪಾನದಿಂದ ಹೆತ್ತೈಕರುಗಳು ದೂರವಿರಬೇಕು. ಇಂತಹ ಕಠಿಣ ವ್ರತಾಚರಣೆ ಮಾಡುವ ಆ ಸದಸ್ಯನಿಗೆ **"ಹೆತ್ತೈಕರು"** ಎನ್ನುತ್ತಾರೆ. ಹಬ್ಬದ ವೇಳೆ ಸಾಮಾನ್ಯ ಭಕ್ತರು ಇವರಿಂದ ಆಶೀರ್ವಾದ ಪಡೆಯುವುರು ಅತ್ಯಂತ ಪವಿತ್ರ ಎಂದು ನಂಬುತ್ತಾರೆ.

ಪವಿತ್ರವಾದ ಹೆತ್ತೆ ದಡಿಯನ್ನು ವರ್ಷಕ್ಕೊಮ್ಮೆ ಹಬ್ಬದ ವೇಳೆಯಲ್ಲಿ ತೆಗೆಯಲಾಗುತ್ತದೆ. ಉಳಿದ ಸಮಯದಲ್ಲಿ ಬಡಗರ ಮನೆಯ ಒಳಮನೆ [ಒಗಮನೆ]ಯ **"ಹಗ್ಗೊಟ್ಟು"** ಎಂಬ ಪವಿತ್ರ ಮೂಲೆಯಲ್ಲಿ ಒಂದು ಬಿದಿರಿನ ಕೊಳವೆಯಲ್ಲಿ ಇಟ್ಟು ಜೋಪಾನ ಮಾಡಲಾಗುತ್ತದೆ. ಈ ಹೆತ್ತೆದಡಿಯನ್ನು ಪೂಜಾರಿಯು ಶುದ್ಧತೆ ಹಾಗೂ ಪೂಜಾ ಕೈಂಕರ್ಯಗಳನ್ನು ಮಾಡಿ ಅನಂತರದಲ್ಲಿ ಕುಟುಂಬಕ್ಕೆ ನೀಡಲಾಗುತ್ತದೆ. ಈ ದಡಿಯು ತಲೆಮಾರುಗಳಿಂದ ತಲೆಮಾರುಗಳಿಗೆ ಹಸ್ತಾಂತರಿಸಲ್ಪಡುತ್ತದೆ. ಹಗ್ಗೊಟ್ಟು ಮೂಲೆಯನ್ನು ಪ್ರತಿ ಸೋಮವಾರ **"ಹುಟ್ಟು ನೀರು"** [ಬಡಗ ಭಾಷೆಯಲ್ಲಿ] ಅಂದರೆ; ಮಡಿ ನೀರನ್ನು ತಂದು ಸ್ವಚ್ಛ ಮಾಡಿ ಹಸು ಸಗಣಿಯಿಂದ ಸಾರಿಸಲಾಗುತ್ತದೆ. ಈ ಹಗ್ಗೊಟ್ಟು ಮೂಲೆಯಲ್ಲಿ ಮಣ್ಣಿನ ದೀಪವನ್ನು ಹಚ್ಚಿ ಇಡಲಾಗುತ್ತದೆ. ಹಿಂದಿನ ಕಾಲದಲ್ಲಿ ಪಶುಸಂಗೋಪನಾ ಕುಟುಂಬಗಳು ಈ ಹಗ್ಗೊಟ್ಟು ಮೂಲೆಯಲ್ಲಿ ಹಾಲನ್ನು ಸಂಗ್ರಹಿಸಿ ಇಡುತ್ತಿದ್ದರು. ಬಡಗರ ಪ್ರಕಾರ; ಹಗೊಟ್ಟು ಮೂಲೆ ಪವಿತ್ರವಾಗಿದ್ದು ಇಲ್ಲಿ ಎಂಜಲು ಮಾಡುವಂತಿರಲಿಲ್ಲ ಹಾಗೂ ಹೆಂಗಸರು ಮುಟ್ಟಿನ ವೇಳೆ ಪ್ರವೇಶಿಸುವಂತೆ ಇರಲಿಲ್ಲ. ಹಗೊಟ್ಟು ಮೂಲೆಯಿಂದ ಯಾವುದೇ ವಸ್ತುಗಳನ್ನು ಹೊರ ತೆಗೆದಾಗ ಅದಕ್ಕೆ ಕರ್ಪೂರ ಹೊಗೆ ತೋರಿಸಿ ಶುದ್ಧೀಕರಿಸಿದ ನಂತರವೇ ಹೊರಗೆ ತೆಗೆದುಕೊಂಡು ಹೋಗಬೇಕು. ಇದನ್ನು "ಕರ್ಪೂರ ಅತ್ತೊಂದು" ಎನ್ನುತ್ತಾರೆ. ಹಾಗೆಯೇ ಹೆತ್ತೆ ದಡಿಯನ್ನು ಬಿದಿರಿನ ಕೊಳವೆಯಿಂದ ಹೊರ ತೆಗೆದು ಅದಕ್ಕೆ ಕರ್ಪೂರದ

ಹೊಗೆ ತೋರಿಸಿ, ಉಪ್ಪು, ಹುಣಸೆಹಣ್ಣನ್ನು ಲೇಪಿಸಿ ತೆಂಗಿನನಾರಿನಿಂದ ಸ್ವಚ್ಛ ಮಾಡಲಾಗುತ್ತದೆ. ಮತ್ತೊಮ್ಮೆ ಹೆತ್ತೆ ದಡಿಯನ್ನು ಸಮಾರಂಭದ ದಿನ ಶುದ್ಧಿಗೊಳಿಸಲಾಗುತ್ತದೆ. ಹೆತ್ತೆ ದಡಿಯ ಶುದ್ಧಿಯಿಂದ ಹೆತ್ತೈ ಹಬ್ಬದ ಆಚರಣಾ ಕ್ರಮಗಳು ಆರಂಭವಾಗುತ್ತದೆ.

ಪ್ರತಿ ವರ್ಷ ವಿವಿಧ ಹಟ್ಟಿಗಳಿಂದ [ಗ್ರಾಮ] ಸಾಂಪ್ರದಾಯಿಕ ಉಡುಗೆ ತೊಟ್ಟು ಕುಟುಂಬದ ಹೆತ್ತೈ ದಡಿ [ಕೋಲು] ಹಿಡಿದು ಹಬ್ಬದ ಹಿಂದಿನ ಶುಕ್ರವಾರವೇ ಪಾದಯಾತ್ರೆ ಮೂಲಕ ಬಿರಗಣಿಯ ಹೆತ್ತೆ ಮನೆ [ಗುಡಿ] ಕಡೆಗೆ ತೆರಳುತ್ತಾರೆ. ಪಾದಯಾತ್ರೆ ವೇಳೆ ಹೆತ್ತೆಕರುಗಳು **"ಎ ಹ ಹೋ"** ಎಂದು ಕೂಗುವ ಮೂಲಕ ಎಲ್ಲರನ್ನೂ ಹರಸುತ್ತಾ ಹೋಗುತ್ತಾರೆ. ಎ.ಹ.ಹೋ ಎಂದು ಕೂಗುವುದಕ್ಕೆ ಬಡಗ ಅತ್ತಿಕೊಡು ಎನ್ನುತ್ತಾರೆ. ಬಡಗ ಭಾಷೆಯಲ್ಲಿ ಹೆತ್ತೈಕರುಗಳು ಹರಸುವುದನ್ನು 'ಹರಚೋದು' ಎನ್ನುತ್ತಾರೆ. ಪಾದಯಾತ್ರೆ ಹೊರಡುವ ಹೆತ್ತೈಕರುಗಳಿಗೆ ಬಡಗ ಮಹಿಳೆಯರು ನೆಲಕ್ಕ ಬಟ್ಟೆಯನ್ನು ಹಾಸಿ ಕರೆದೊಯ್ಯುತ್ತಾರೆ. ಈ ವೇಳೆ ಬೇರೆ ಮಹಿಳೆಯರು, ಪುರುಷರು, ಮಕ್ಕಳು ಅಡ್ಡ ಬರುವಂತಿಲ್ಲ ಇದನ್ನು ಬಡಗ ಭಾಷೆಯಲ್ಲಿ **'ಅಡ್ಡ ಬಬ್ಬದು'** ಎನ್ನುತ್ತಾರೆ.

ಹೆತ್ತೆಯ ಹಬ್ಬದಲ್ಲಿ ನೇಯುವ ಮನೆ ಎಂದು ಕರೆಯಲ್ಪಡುವ ವಿಶೇಷ ಕಟ್ಟಡವು ಹೆತ್ತೆ ಮನೆ [ಗುಡಿ] ಯ ಸಮೀಪವೇ ಇರುತ್ತದೆ. ಇದು ಸಂಪೂರ್ಣ ಗ್ರಾಮಕ್ಕೆ ಸೇರಿರುವ ಸಾಮೂಹಿಕ ಆಸ್ತಿಯಾಗಿದೆ. ಹಬ್ಬಕ್ಕೆ ಕೆಲವು ದಿನಗಳ ಮೊದಲೇ ಸಿರುಮುಗ್ಗೈ ಪ್ರದೇಶದ ಪಾರಂಪರಿಕ **"ಮಗಚೆಟ್ಟಿ"** ಎಂಬ ನೇಯ್ಗಾರನು ಇಲ್ಲಿಗೆ ಬಂದು ನೆಲೆಸುತ್ತಾನೆ. ಹೆತ್ತೈಕರುಗಳ ರೀತಿಯೇ ಈತನೂ ಸಹ ವ್ರತಾಚಾರಣೆಗಳನ್ನು ಮಾಡಬೇಕು. ಅನಂತರದಲ್ಲಿ ನೇಯುವ ಮನೆಯಲ್ಲಿ ಕುಳಿತು ಪುರೋಹಿತರಿಗೆ ಒಂದು ವರ್ಷಕ್ಕೆ ಅಗತ್ಯವಿರುವಷ್ಟು ಬಟ್ಟೆಯನ್ನು ನೇಯುತ್ತಾನೆ. ಹೆತ್ತೆಗೆ ಏಳು ಪಟ್ಟಿಗಳಿರುವ ಬಿಳಿ ಬಟ್ಟೆಯನ್ನು ನೇಯುತ್ತಾನೆ. ಈ ಏಳು ಪಟ್ಟಿಗಳು ಏಳು ಹೆತ್ತೈಯರನ್ನು ಪ್ರತಿನಿಧಿಸುತ್ತದೆ. ಅನಂತರದಲ್ಲಿ ನೇಯ್ದ ಬಟ್ಟೆಗಳನ್ನು ಬಡಗರು, ಪುರೋಹಿತರು **"ಮಡಿ ಹಳ್ಳ"** ಎಂಬ ನಿರ್ದಿಷ್ಟ ಜಾಗದಲ್ಲಿ ತೊಳೆಯಲಾಗುತ್ತದೆ. ದಡದಲ್ಲಿ ಒಣಗಲು ಹಾಸಿ, ಅನಂತರದಲ್ಲಿ ಒಣಗಿದ ಬಟ್ಟೆಯನ್ನು ಬಡಗರು, ಪುರೋಹಿತರು ಧರಿಸುತ್ತಾರೆ. ಹೆತ್ತೈಗೆ ಮಡಿ ಬಟ್ಟೆಯನ್ನು ಧರಿಸಿ ಅಲಂಕಾರಿಸಲಾಗುತ್ತದೆ. ಈ ಕೆಲಸಕ್ಕೆ ಮಗಚೆಟ್ಟಿಗೆ ದೇವಾಲಯದ ನಿಧಿಯಿಂದ ನಿಗದಿತ ಹಣ ನೀಡಲಾಗುತ್ತದೆ. ಬಡಗರು ಹಬ್ಬಕ್ಕಾಗಿ **"ದುಬಟ್ಟಿ, ಕಚ್ಚೆ"**ಗಳನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ದುಬಟ್ಟಿ ಎಂದರೆ; ದೇಹವನ್ನು ಚಳಿಯಿಂದ ರಕ್ಷಿಸಿಕೊಳ್ಳಲು ಬಳಸುತ್ತಿದ್ದ ದಪ್ಪನೆಯ ಬಿಳಿ ಶಾಲು, ಕಚ್ಚೆ ಎಂದರೆ ಪುರುಷರ ಒಳ ಉಡುಪಾಗಿದ್ದು, ಚಿಕ್ಕ ಬಟ್ಟೆಯ ಪಟ್ಟಿಗಳು ಎಂದರ್ಥ, ಈ ಬಟ್ಟೆಗಳನ್ನು ಗ್ರಾಮದಲ್ಲಿ ಪ್ರತ್ಯೇಕವಾಗಿ ವಾಸಿಸುವ **'ದೇವಾಂಗ'** ಜಾತಿಯವರು, ಪಾರಂಪರ್ಯ ನೇಯ್ಗಾರರು ನೇಯುತ್ತಾರೆ. ಇತರ ಗ್ರಾಮಗಳಲ್ಲಿ ಸಾಮಾನ್ಯವಾಗಿ ಬಡಗರು ನೇಯ್ಗಾರರ ಗ್ರಾಮಕ್ಕ ತೆರಳಿ ಬಟ್ಟೆ ಪಡೆಯುತ್ತಾರೆ.

ಹಬ್ಬದ ವೇಳೆಯಲ್ಲಿ ಬಡಗರ ವೇಷ–ಭೂಷಣದ ಬಗ್ಗೆ ನೋಡುವುದಾದರೆ; ಬಡಗ ಮಹಿಳೆಯರು ಸೀರೆಯೊಂದಿಗೆ **"ಮುಂಡು, ತುಂಡು, ಪಟ್ಟು**'ಗಳನ್ನು ಧರಿಸುತ್ತಾರೆ. ಮುಂಡು ಎಂದರೆ; ದೇಹದ ಮೇಲೆ ಹೊದೆಯುವ ಬಿಳಿ ಬಣ್ಣದ ಬಟ್ಟೆ. ತುಂಡು ಎಂದರೆ; ಎದೆಯ ಸುತ್ತ ಕಟ್ಟಿ ಮೊಣಕಾಲುವರೆಗೆ ಇಳಿ ಬೀಳುವ ಬಟ್ಟೆ, ತುಂಡು ಕಟ್ಟಲು ಬಟ್ಟೆಯ ಎರಡು ಭಾಗದಲ್ಲಿ ದಾರಗಳನ್ನು ನೀಡಲಗುತ್ತದೆ. ಬಡಗ ಭಾಷೆಯಲ್ಲಿ ಎದೆಯ ಭಾಗದಲ್ಲಿ ಕಟ್ಟುವ ದಾರವನ್ನು **'ಮೇಲ್ಸಟ್ಟೆ'** ಎಂತಲೂ ಸೊಂಟದ ಭಾಗದಲ್ಲಿ ಕಟ್ಟುವ ದಾರವನ್ನು **"ನಡುಸಟ್ಟೆ"** ಎನ್ನುತ್ತಾರೆ. ಪಟ್ಟು ಎಂದರೆ ತಲೆಯ ಮೇಲೆ ಕಟ್ಟುವ ಬಿಳಿ ಬಟ್ಟೆ. ಪುರುಷರು **"ಸಿಲೆ"** ಎನ್ನುವ ನೀಲಿ, ಕೆಂಪು ಗೀರುಗಳಿಂದ ಬಿಳಿ ಹೊದಿಕೆ ಬಳಸುತ್ತಾರೆ. ಕೆಲವೊಮ್ಮೆ ಈ ಸಿಲೆಗಳು ತೋಡ ಮಹಿಳೆಯರ ಕಸೂತಿಯಿಂದ ಅಲಂಕರಿಸಲ್ಪಟ್ಟಿರುತ್ತದೆ. ಇದನ್ನು **"ಕುಟ್ಟಣ ಸಿಲೆ'** ಎನ್ನುತ್ತಾರೆ. ಪುರುಷರು ಮುಂಡರೆ [ಪೇಟ] ಮತ್ತು ಮುಂಡು [ಧೂತಿ]ಯನ್ನು ಧರಿಸುತ್ತಾರೆ. ತಲೆಗೆ ಪೇಟವನ್ನು ಧರಿಸುತ್ತಾರೆ. ಇವೆಲ್ಲವೂ ಬಿಳಿ ಬಣ್ಣದಿಂದಲೇ ನೇಯಲ್ಪಟ್ಟಿರುತ್ತದೆ.

ಹಟ್ಟಿಯ ಪ್ರತಿಯೊಂದು ಮನೆ ಕೂಡ **'ಹಣ ಕಟ್ಟೋದು'** ಎಂಬ ಆಚರಣೆ ಮಾಡುತ್ತಾರೆ. ಐದು 25 ಪೈಸೆ ನಾಣ್ಯಗಳನ್ನು ಒಂದು ಬಿಳಿ ಬಟ್ಟೆಯಲ್ಲಿ ಕಟ್ಟಿ ಹೆತ್ತೆ ಗುಡಿಗೆ ಅರ್ಪಿಸಲಾಗುತ್ತದೆ. ಬಿಕ್ಕೆ ಮರದ ಕೆಳಗೆ ಇರುವ ಒಂದು ಕಲ್ಲನ್ನು ಹೆತ್ತೆ ಎಂದು ಪೂಜಿಸಲಾಗುತ್ತದೆ. ಆದರೆ ಕಾಲಕ್ರಮೇಣ ಬಡಗರು ಹೆತ್ತೆಗೆ ಗುಡಿ ಕಟ್ಟಿ, ಮೂರ್ತಿಯ ರೂಪದಲ್ಲಿ ಪೂಜಿಸುತ್ತಿದ್ದಾರೆ. ಮೊದಲು ಹೆತ್ತೆ ಗುಡಿ ಕಟ್ಟಡದಿಂದ ಆವೃತ್ತವಾಗಿರಲಿಲ್ಲ. ಹಬ್ಬದ ದಿನಗಳನ್ನು ಸಂಗೀತ, ವಾದ್ಯ, ಗಾಯನ, ನೃತ್ಯ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಪೂಜೆಯ ದಿನ ಭಕ್ತರು ಹೆತ್ತೆ ಮನೆ [ಗುಡಿ]ಯಲ್ಲಿ ಗರ್ಭಗುಡಿಯ ಪ್ರವೇಶದ ಬಳಿ ಇರುವ "ದೊಡ್ಡ ದೀಪದ" [ಬಡಗ ಭಾಷೆಯಲ್ಲಿ **ದೊಡ್ಡ ದೀವಿಗೆ** ಎನ್ನುತ್ತಾರೆ] ಮುಂದೆ ನಮಸ್ಕರಿಸಿ ಕಾಣಿಕೆ ಅರ್ಪಿಸುತ್ತಾರೆ. ಐದು 25 ಪೈಸೆ ನಾಣ್ಯಗಳನ್ನು ಮಾತ್ರ ಕಾಣಿಕೆಯಾಗಿ ನೀಡಲಾಗುತ್ತದೆ. ಇದು ದೇವಿಯ ಮುಂದೆ ಎಲ್ಲರೂ ಸಮಾನರು ಎಂಬ ಸಂದೇಶ ಸಾರುತ್ತದೆ.

ಹಬ್ಬದ ದಿನಗಳಲ್ಲಿ **"ಹೆತ್ತೆ ಹರಕೆ" [ಬಡಗ ಭಾಷೆ** ] ಎಂಬ ಮಂತ್ರಗಳನ್ನು ಜಪಿಸಲಾಗುತ್ತದೆ. ದಂಡ ಹೊಂದಿರುವವರು ದಿವ್ಯ ವಾಕ್ಯಗಳ ಮೂಲಕ ಮಾರ್ಗದರ್ಶನ ನೀಡಿ ತಪ್ಪುಗಳಿಗೆ **"ಪ್ರಾಯಚ್ಚಿತ" [ಬಡಗ ಭಾಷೆ]** ಸೂಚಿಸುತ್ತಾರೆ. ಕೆಲವು ವೇಳೆ ಭವಿಷ್ಯ ವಾಣಿಗಳನ್ನು ಸಹ ನುಡಿಯುತ್ತಾರೆ. ಕೊನೆಯ ದಿನ ಬೆಳಗ್ಗೆ ಪೂಜಾರಿ ನೇಯ್ದ ಬಟ್ಟೆಗಳನ್ನು **"ಮಡಿಹಳ್ಳ" [ಬಡಗ ಭಾಷೆ]** ತೊಳೆದು ಅವುಗಳನ್ನು ಒಣಗಿಸಿ ಹೆತ್ತೈಗೆ ಧರಿಸಲಾಗುತ್ತದೆ. ಅನಂತರ ದೇವಿಯ ದರ್ಶನಕ್ಕೆ ಅವಕಾಶ ಇರುತ್ತದೆ. ಬಡಗ ಭಾಷೆಯಲ್ಲಿ ಹೆತ್ತೆಗ ಮಾಡುವ ಒಂದು ಪ್ರಾರ್ಥನೆಯನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

***ಸಿನ್ನದ ಕೊಡ್ಡೆ ಇಡುತ್ತು ; ಸಿಂಗಾರದ ನಾಡ್ಡೆ ನೆನೆದು***

***ಬೆತ್ತು ದಡಿಯ ಹೆಗಲುಗೆ ಎತ್ತಿ.... ಹೆತ್ತೈ***

*ನೀ ಸತಿಯದ ವಾಕ ಹೇಗಿ; ಸಂದೋಷದ ಮಾತ ತೋರಿ;*

*ಸೀಮಿಯ ಸಿರಿ ತೋರ ಬಾ, ಸೀಮಿಗೆ ಸಿರಿ ತೋರ ಬಾ,*

*ಹ ಹ ಹೆತ್ತೈ, ಹೊ ಹೊ ಹೆತ್ತೈ, ಆನಂದ ಮಾಡಿನಿಯೋ ಓಡಿ ಬಾ ಹೆತ್ತೈ.*

ಇದರ ಅರ್ಥವೇನೆಂದರೆ; ಚಿನ್ನದ ಕೊಡೆಯನ್ನು ಹಿಡಿದು, ಬಂಗಾರದಂತಹ ನಾಡನ್ನು ನೆನೆದು, ಬೆತ್ತದ ಕೋಲನ್ನು ಹೆಗಲಿಗೆ ಎತ್ತಿ, ಹೆತ್ತೈ ನಿನ್ನ ಸತ್ಯದ ಮಾತನ್ನು ಹೇಳಿ, ಸಂತೋಷದ ಮಾತನ್ನು ಕೇಳಿಸಿ ಸೀಮೆಗೆ ಸಿರಿಯನ್ನು ನೀಡು ಬಾ. ಹ ಹ ಹೇತ್ತೈ, ಹೊ ಹೊ ಹತ್ತೈ, ಆನಂದವ ನೀಡಲು ಬೇಗ ಬಾ ಹೆತ್ತೈ, ಇಲ್ಲಿ ಸಿಂಗಾರದ ನಾಡು ಎಂದರೆ; ತಮ್ಮ ಮೂಲ ಸ್ಥಳವಾದ ಹಳೇ ಮೈಸೂರು ಪ್ರಾಂತ್ಯದ ಪ್ರದೇಶದ ಉಲ್ಲೇಖಗಳೆಂದು ಊಹಿಸಬಹುದಾಗಿದೆ.

ಹಬ್ಬದ ಅವಿಭಾಜ್ಯ ಅಂಗವೆಂದರೆ; ಅನ್ನದಾನ. ಅನೇಕ ಭಕ್ತರು ತಮ್ಮ ಹರಕೆಗಳನ್ನು ತೀರಿಸಲು ಭಕ್ತರಿಗೆ ಅನ್ನದಾನವನ್ನು ಏರ್ಪಡಿಸುತ್ತಾರೆ. ಹೆತ್ತೆಯ ಹಬ್ಬದ ದಿನ ಅಂದರೆ ಕೊನೆಯ ದಿನ ಅನ್ನದಾನ ನಡೆಯುತ್ತದೆ. ಬಡಗ ಭಾಷೆಯಲ್ಲಿ ಅನ್ನದಾನವನ್ನು **"ಹಿಟ್ಟು"** ಎಂದು ಕರೆಯುತ್ತಾರೆ. ಅನಂತರದಲ್ಲಿ ದಡಿ ಹೊಂದಿದ ಕುಟುಂಬದ ಪುರುಷ ಸದಸ್ಯರು ತಮ್ಮ ತಮ್ಮ ಗ್ರಾಮಕ್ಕೆ ತೆರಳುತ್ತಾರೆ. ದಡಿ ಹೊಂದಿದ ಪುರುಷರಿಗೆ ಭವ್ಯವಾದ ಸ್ವಾಗತ ದೊರೆಯುತ್ತದೆ.

**ಉಪಸಂಹಾರ:** ಇಂದಿನ ಕಾಲದವರೆಗೂ ಹೆತ್ತೆ ಪರಂಪರೆ ಬಡಗರಲ್ಲಿ ಜೀವಂತವಾಗಿದೆ. ನಗರೀಕರಣದಿಂದ ಬೇರೆ ಬೇರೆ ಸ್ಥಳಗಳಲ್ಲಿ ವಾಸವಿದ್ದರೂ ಸಹ ಬಡಗರು ಪ್ರತಿ ವರ್ಷ ತಮ್ಮ ಹಟ್ಟಿಗೆ ಹಿಂತಿರುಗಿ ಹೆತ್ತೆ ಹಬ್ಬದಲ್ಲಿ ಪಾಲ್ಗೊಳ್ಳುತ್ತಾರೆ. ಹೆತ್ತೆ ಹಬ್ಬವು ಕೇವಲ ಒಂದು ಧಾರ್ಮಿಕ ಆಚರಣೆ ಅಲ್ಲ, ಅದು ಬಡಗ ಜೀವನದ ಏಕತೆಯ ಉತ್ಸವ. ಹೆತ್ತೆ ಮನೆ [ಗುಡಿ]ಗಳಲ್ಲಿ ಮೊದಲಿಗೆ ಒಂದು ದೀಪ [ಬಡಗ ಭಾಷೆಯಲ್ಲಿ ದೊಡ್ಡ ದೀವಿಗೆ] ಇರುತಿತ್ತು. ಕಾಲಕಳೆದಂತೆ ಅದು ಪ್ರತಿಮೆಯಾಗಿ ಬದಲಾಯಿತು. ಹಿಂದಿನ ಕಾಲದಲ್ಲಿ ಹೆತ್ತೆಯನ್ನು ದೀಪದ ರೂಪದಿಂದ ಪೂಜಿಸಲಾಗುತ್ತಿತ್ತು. ಆಧುನೀಕರಣದಿಂದ ಬಡಗರು ಆಚರಣೆಯಲ್ಲಿ ಹಲವಾರು ಮಾರ್ಪಾಡುಗಳನ್ನು ಮಾಡಿಕೊಂಡರು ಅದರಲ್ಲಿ ಹೆತ್ತೆ ವಿಗ್ರಹರಾಧನೆಯು ಸಹ ಒಂದು. ಅದರ ಜೊತೆಗೆ ಪ್ರಾಣಿ ಬಲಿಯಂತಹ ಪುರಾತನ ಆಚರಣೆಗಳು ಕಾಲಕ್ರಮೇಣ ಬದಲುಗೊಂಡು, ಇಂದು ಹೆತ್ತೆಗೆ ಪ್ರಾಣಿಬಲಿ ಬದಲಿಯಾಗಿ ಹಾಲು, ಧಾನ್ಯ, ಹೂವು, ಕಾಯಿಗಳನ್ನು ಅರ್ಪಿಸುತ್ತಾರೆ. ಆಚರಣೆಗಳು ಬದಲಾವಣೆ ಆದರೂ ಹೆತ್ತೆ ಮೇಲಿನ ಭಕ್ತಿ ಇಂದಿಗೂ ಮೊದಲಿನಂತೆಯೇ ಜೀವಂತವಾಗಿದೆ.

ಹೆತ್ತೆ ಪರಂಪರೆ ಮಹಿಳಾ ಗೌರವವನ್ನು, ಸಮಾನತೆಯನ್ನು ಒತ್ತಿ ಹೇಳುತ್ತದೆ. ಬಡಗ ಸಮಾಜವು ಕೃಷಿ ಮತ್ತು ಪಶುಸಂಗೋಪನೆಯ ಮೇಲೆ ಆಧಾರಿತವಾದದ್ದು, ಈ ಕಾರ್ಯಗಳಲ್ಲಿ ಮಹಿಳೆಯ ಪುರುಷರ ಸಮಾನದಷ್ಟೇ ಪಾಲ್ಗೊಳ್ಳಬೇಕಾಗಿತ್ತು. ಕುಟುಂಬದ ಆರ್ಥಿಕ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರವೂ

ಇರುತ್ತಿತ್ತು. ಅದರೊಂದಿಗೆ ಗೃಹಕಾರ್ಯಗಳಲ್ಲಿ ಮಹಿಳೆಯರು ಹೆಚ್ಚಿನ ಸಮಯ ಕಳೆಯುತ್ತಿದ್ದರು. ಹೊಸ ತಲೆಮಾರಿನ ಬಡಗ ಯುವಕರು ಹೆತ್ತೈ ಹಬ್ಬವನು ತಮ್ಮ ಸಾಂಸ್ಕೃತಿಕ ಗುರುತಿನ ಭಾಗವಾಗಿ ನೋಡುತ್ತಾರೆ. ಹೆತ್ತೆ ಕಥೆಗಳು ಬಡಗರ ನೈತಿಕ ಬಿಂಬಗಳಾಗಿವೆ. ಅದರಲ್ಲಿ ಶಾಂತಿ, ಸತ್ಯ, ಸಮಾನತೆ ಮೌಲ್ಯಗಳು ಇದ್ದು, ಬಡಗರ ನಂಬಿಕೆಯ ಪ್ರಕಾರ; ಹೆತ್ತೆ ದೇವಿಯ ಶಕ್ತಿ ಸಮುದಾಯದ ಒಳಿತಿಗಾಗಿ ಮೀಸಲಿರಿಸಲ್ಪಟ್ಟಿದೆ. ಇದು ಬಡಗ ಸಮುದಾಯದ ಏಕತೆಗೆ ಒತ್ತು ನೀಡುತ್ತದೆ. ಸಾಮಾಜಿಕ ದೃಷ್ಟಿಯಿಂದ ಹೆತ್ತೈ ಹಬ್ಬವು ಕುಲಗಳನ್ನು ಮೀರಿ ಎಲ್ಲರನ್ನು ಹಬ್ಬಗಳನ್ನು ಒಂದೇ ಆಧ್ಯಾತ್ಮಿಕ ಬಂಧದಲ್ಲಿ ಕೊಂಡೊಯ್ಯುತ್ತದೆ. ಹಲವಾರು ಬದಲಾವಣೆಗಳ ನಡುವೆಯು ಬಡಗರು ಈ ಸಂಪ್ರದಾಯಗಳನ್ನು ಉಳಿಸಿಕೊಂಡಿರುವುದು ಬಹಳ ಮಹತ್ವದ ವಿಷಯವಾಗಿದೆ.

## ಗ್ರಂಥಸೂಚಿ


1. ಬ್ರಿಕ್ಸ್, ಜೆ. ಡಬ್ಲ್ಯೂ. ನೀಲಗಿರಿ ಪ್ರದೇಶದ ಆದಿಮ ಬುಡಕಟ್ಟುಗಳು ಮತ್ತು ಸ್ಮಾರಕಗಳ ಕುರಿತ ವಿವರಣೆ. ಮದ್ರಾಸ್: ಗವರ್ನ್ಮೆಂಟ್ ಪ್ರೆಸ್, 1873.

2.ಫ್ರಾನ್ಸಿಸ್,ಡಬ್ಲ್ಯೂ.ದಿ ನೀಲ್ಗಿರೀಸ್. ಮದ್ರಾಸ್ ಡಿಸ್ಟ್ರಿಕ್ಟ್ ಗೆಜೆಟಿಯರ್ಸ್.ಮದ್ರಾಸ್:ಗವರ್ನ್ಮೆಂಟ್ ಪ್ರೆಸ್,1908.

3. ಹಾಕಿಂಗ್ಸ್, ಪಾಲ್. ಏನ್ಷಿಯಂಟ್ ಹಿಂದೂ ರೆಫ್ಯೂಜೀಸ್: ಬಡಗ ಸೋಷಿಯಲ್ ಹಿಸ್ಟರಿ, 1550–1975. ದಿ ಹೇಗ್: ಮೌಟನ್ ಪಬ್ಲಿಷರ್ಸ್, 1980.

4. ಹಾಕಿಂಗ್ಸ್, ಪಾಲ್. ಕೌನ್ಸೆಲ್ ಫ್ರಮ್ ದಿ ಏನ್ಷಿಯಂಟ್ಸ್: ಎ ಸ್ಟಡಿ ಆಫ್ ಬಡಗ ಪ್ರೊವರ್ಬ್ಸ್, ಪ್ರೇಯರ್ಸ್, ಓಮೆನ್ಸ್ ಅಂಡ್ ಕರ್ಸಸ್. ಬರ್ಲಿನ್: ಮೌಟನ್ ಡಿ ಗ್ರೂಟರ್, 1988.

5. ಹಾಕಿಂಗ್ಸ್, ಪಾಲ್, ಸಂಪಾದಕರು. ಬ್ಲೂ ಮೌಂಟೈನ್ಸ್: ದಿ ಎಥ್ನೋಗ್ರಫಿ ಅಂಡ್ ಬಯೋಜಿಯೋಗ್ರಫಿ ಆಫ್ ಎ ಸೌತ್ ಇಂಡಿಯನ್ ರೀಜನ್. ನವದೆಹಲಿ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1988.

6. ಹಾಕಿಂಗ್ಸ್, ಪಾಲ್. ಕೈಂಡ್ರೆಡ್ಸ್ ಆಫ್ ದಿ ಅರ್ಥ್: ಬಡಗ ಹೌಸ್‌ಹೋಲ್ಡ್ ಸ್ಟ್ರಕ್ಚರ್ ಅಂಡ್ ಡೆಮೋಗ್ರಫಿ. ನವದೆಹಲಿ: ಸೇಜ್ ಪಬ್ಲಿಕೇಷನ್ಸ್, 1999.

7. ಹಾಕಿಂಗ್ಸ್, ಪಾಲ್. ಸೋ ಲಾಂಗ್ ಎ ಸಾಗಾ: ಫೋರ್ ಸೆಂಚುರೀಸ್ ಆಫ್ ಬಡಗ ಸೋಷಿಯಲ್ ಹಿಸ್ಟರಿ. ನವದೆಹಲಿ: ಮನೋಹರ್ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, 2013.

8. ಥರ್ಸ್ಟನ್, ಎಡ್ಗರ್ ಮತ್ತು ಕೆ. ರಂಗಾಚಾರಿ. ಕಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯಾ. ಸಂಪುಟ 1. ಮದ್ರಾಸ್: ಗವರ್ನ್ಮೆಂಟ್ ಪ್ರೆಸ್, 1909.

9. ಹೈಡೆಮನ್, ಫ್ರಾಂಕ್. “ಆಬ್ಜೆಕ್ಟಿಫಿಕೇಶನ್ ಅಂಡ್ ಸೋಷಿಯಲ್ ಎಸ್ಥೆಟಿಕ್ಸ್: ಮೆಮೊರಾಂಡಾ ಅಂಡ್ ದಿ ಸೆಲೆಬ್ರೇಷನ್ ಆಫ್ ‘ಬಡಗ ಡೇ’.” ಏಷ್ಯನ್ ಎಥ್ನಾಲಜಿ 73, ಸಂಚಿಕೆ 1–2 (2014): 91–109.

10. ಹೈಡೆಮನ್, ಫ್ರಾಂಕ್. “ಬಿಟ್ವೀನ್ ಡಿವೋಟೀ ಅಂಡ್ ಗಾಡ್: ದಿ ಸ್ಟಡಿ ಆಫ್ ಅಟ್ಮಾಸ್ಫಿಯರ್ ಇನ್ ಎ ಸೌತ್ ಇಂಡಿಯನ್ ಟೆಂಪಲ್ ಫೆಸ್ಟಿವಲ್.” ಏಷ್ಯನ್ ಎಥ್ನಾಲಜಿ 80, ಸಂಚಿಕೆ 2 (2021).

11. ಮಾದ ಗೌಡರ್, ಎನ್. ಎನ್. ಪೊಕ್ಕ. ಶ್ರೀ ಹೆತ್ತೆಯಮ್ಮಾಳ್ ಸರಿತ್ತಿರಂ (ಶ್ರೀ ಹೆತ್ತೆ ಅಮ್ಮನವರ ಇತಿಹಾಸ). ತಮಿಳು ಹಸ್ತಪ್ರತಿ/ಕಿರುಪುಸ್ತಕ, ಅಂದಾಜು 20ನೇ ಶತಮಾನದ ಮಧ್ಯಭಾಗ.